ಜಗುಲಿಯಲ್ಲಿ ಕುಳಿತುಕೊಳ್ಳುವಂತೆ ಹೇಳಿ ಒಳಗಿನ ಕೋಣೆಗೆ ಹೋಗಿದ್ದಳು. ಅಂದು ಜಗುಲಿಯಲ್ಲಿ ಯಾರೂ ಇದ್ದಿರಲಿಲ್ಲ. ಅದೆಷ್ಟೋ ಹೊತ್ತು ನಾನೊಬ್ಬನೇ ಕುಳಿತಿದ್ದೆ. ಇವೊತ್ತು ಜಗುಲಿಯ ಮೇಲೆ ಕುರ್ಚಿಯೊಂದರ ಮೇಲೆ ಠೊಣಪನೊಬ್ಬ ಕುಳಿತಿದ್ದ. ಜಗುಲಿಯೊಳಗೆ ಕಾಲಿಡುತ್ತಿರುವಂತೆ ನನ್ನನ್ನು ನೋಡಿ 'ಏನೋ ಮಾಣಿ? ಏನು ಬಂದೆ? ಎಲ್ಲಿಂದ ಬಂದೆ?' ಎಂದು ಏಕಕಾಲದಲ್ಲಿ ಮೂರು ಪ್ರಶ್ನೆ ಕೇಳಿದ.

ಹೇಳಿದೆ: 'ಮಂದಳ್ಳಿಯಿಂದ. ರಾಯರಿಗೆ ಒಂದು ಪತ್ರ ಕೊಡಬೇಕಿತ್ತು. ಕೊಡುವಂತೆ ಚಿಕ್ಕಮ್ಮ ಹೇಳಿದ್ದಾಳೆ.'

'ನಿನ್ನ ಚಿಕ್ಕಮ್ಮ ಪತ್ರ ಕೊಟ್ಟಿದ್ದಾಳೆಯೋ? ಅವಳೇ ಯಾಕೆ ಬರಲಿಲ್ಲ' ಮತ್ತೆ ಅವನ ಪ್ರಶ್ನೆ.

'ಯಾಕೆ ಬರಲಿಲ್ಲ... ನನಗೆ ಗೊತ್ತಿಲ್ಲ' ಎಂದೆ.

'ಎಲ್ಲಿ ಕೊಡು ಪತ್ರವನ್ನು' ಎಂದ ಆ ಠೊಣಪ ನನ್ನತ್ತ ತನ್ನ ಕೈ ಚಾಚಿ.

**'ನಿಜಾ ಹೇಳು... ನೀನು ಆ ಭಾಸ್ಕರರಾಯರಿಗೆ ತಂದುಕೊಟ್ಟದ್ದು ನಿನ್ನ ಚಿಕ್ಕಪ್ಪ ಕೊಟ್ಟ ಪತ್ರವಾ ಅಥವಾ ನಿನ್ನ ಚಿಕ್ಕಮ್ಮ ಕೊಟ್ಟದ್ದಾ? ಆ ಭಾಸ್ಕರರಾಯನದು ಏನಿದ್ದರೂ ಹೆಂಗಸರ ಜೊತಗೇ ವ್ಯವಹಾರ... ಗಂಡಸರ ಜೊತೆ ವ್ಯವಹಾರ ಕಡಿಮೆ... ಕಡಿಮೆ ಅಂದರೆ ಏನು... ಇಲ್ಲವೇ ಇಲ್ಲಾ ಅಂದರೂ ಸರಿಯೇ...'**

ಅನುಮಾನಿಸುತ್ತಾ ನಾನು ಅಂಗಿಯ ಬಕ್ಕಣದತ್ತ ಕೈ ಸರಿಸಿದೆ.

'ಕೊಡೋ ಮಹಾರಾಯಾ... ನಿನ್ನ ಚಿಕ್ಕಮ್ಮನ ಪತ್ರವನ್ನು ನಾನು ರಾಯರಿಗೆ ಕೊಡುತ್ತೇನೆ' ಎಂದ ಆತ.

ಪತ್ರ ತೆಗೆದು ಆತನಿಗೆ ಕೊಟ್ಟೆ.

'ಇಲ್ಲೇ ನಿಂತಿರು. ಪತ್ರ ರಾಯರಿಗೆ ಕೊಟ್ಟು ಅವರು ಏನು ಹೇಳುತ್ತಾರೆಯೋ ಕೇಳಿ ಬರುತ್ತೇನೆ' ಆ ಠೊಣಪ ಪತ್ರ ತೆಗೆದುಕೊಂಡು ಒಳಗೆ... ಅದೇ ಆದಿನ ಚಿಕ್ಕಮ್ಮ ಹೊಕ್ಕಿದ್ದ ಕೋಣೆಯ ಒಳಗೆ ಹೋದ.

ಕೆಲ ನಿಮಿಷಗಳ ನಂತರ ಮರಳಿ ಬಂದ ಆ ಠೊಣಪ 'ಆಯಿತು... ನೀನು ಮನೆಗೆ ಹೋಗು. ರಾಯರು ಎಲ್ಲಾ ವ್ಯವಸ್ಥೆ ಮಾಡುತ್ತಾರಂತೆ' ಎಂದ.

'ಪತ್ರಕ್ಕೆ ಉತ್ತರ?' ಮೆಲ್ಲನೆ ಅಂದೆ ನಾನು.

'ಉತ್ತರವೂ ಬರುತ್ತದೆ... ಎಲ್ಲಾ ಬರುತ್ತದೆ... ಹೇಳಿದೆನಲ್ಲಾ... ರಾಯರು ಎಲ್ಲಾ ವ್ಯವಸ್ಥೆ ಮಾಡುತ್ತಾರೆ ಅಂತ. ಹಾಗೆಂದು ನೀನು ನಿನ್ನ ಚಿಕ್ಕಮ್ಮನಿಗೆ ಹೇಳು' ಎಂದ ಆತ.

ಭಾಸ್ಕರರಾಯ ಎನ್ನುವವರನ್ನು ಆ ದಿನವೂ ನಾನು ಕಾಣಲಿಲ್ಲ.

ಅವರ ಮನೆಯ ಜಗುಲಿಯಿಂದ ಹೊರಬಿದ್ದೆ.

ಹಾದಿಯಲ್ಲಿ ನನ್ನ ಕ್ಲಾಸ್‌ನ ಆನಂದ ಸಿಕ್ಕಿದ.

'ಇದೇನೋ... ಮಂದಳ್ಳಿಯಿಂದ ಈ ನಮ್ಮ ವಳಗೆರೆಗೆ ಬಂದಿದ್ದೀಯೆ?' ಕೇಳಿದ.

'ಭಾಸ್ಕರರಾಯರ ಮನೆಗೆ ಬಂದಿದ್ದೆ. ಅವರನ್ನು ಕಾಣಬೇಕಿತ್ತು' ಎಂದೆ.